# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ ಸದಸ್ಯರು, ಜಿಲ್ಲಾ ಪಂಚಾಯತ್, ವಿಜಯಪುರ ಇವರ ಸದಸ್ಯತ್ವವನ್ನು ರದ್ದು ಮಾಡುವ ಆದೇಶವನ್ನು ಹಿಂಪಡೆಯುವ ಬಗ್ಗೆ.

**ಓದಲಾಗಿದೆ:**

1. ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ, ವಿಜಯಪುರ ಇವರ ಮನವಿ ಪತ್ರ ದಿನಾಂಕ: 21-11-2017 ಮತ್ತು 23-11-2017
2. ಜಿಲ್ಲಾಧಿಕಾರಿಗಳು, ವಿಜಯಪುರ ಇವರ ಪತ್ರ ಸಂಖ್ಯೆ: ಜಿಪಂ:ಚುನಾವಣೆ:ಸಿ.ಆರ್: 1656/2016-17, ದಿನಾಂಕ:06-09-2016
3. ಉಪವಿಭಾಗಾಧಿಕಾರಿ, ವಿಜಯಪುರ ಇವರ ಆದೇಶ ಸಂಖ್ಯೆ:ಚುನಾ/ ಸಿ.ಆರ್-17/2016-17, ದಿನಾಂಕ:19-04-2017
4. ಸರ್ಕಾರದ ಸಮ ಸಂಖ್ಯೆ ಆದೇಶ ದಿನಾಂಕ: 03-11-2017.
5. ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ ರಿಟ್ ಪಿಟಿಷನ್ ನಂ. 20433/2017(LB-ELE/CW) W.P No. 201935/2017.

*****

**ಪ್ರಸ್ತಾವನೆ:**

ಮೇಲೆ ಓದಲಾದ, (1) ರ ಪತ್ರದಲ್ಲಿ ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ, ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ವಿಜಯಪುರ ಇವರು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಮನವಿಯಲ್ಲಿ 2016 ರ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಆಯ್ಕೆಯಾದ ನಂತರ ಗುರುನಾಥ ಯಮನಪ್ಪ ಬಿರಾದಾರ್ ಇವರ ದೂರಿನ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿಗಳು, ವಿಜಯಪುರ ಜಿಲ್ಲೆ ಇವರು ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ ಇವರ ಜಾತಿ/ಆದಾಯ ಪ್ರಮಾಣ ಪತ್ರವನ್ನು ರದ್ದುಗೊಳಿಸಿದ್ದ ಕಾರಣ, ಸದರಿ ಆದೇಶದ ಮೇಲೆ ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠದಲ್ಲಿ ಅವರ ಪರವಾಗಿ ಆದೇಶವಾಗಿರುತ್ತದೆ. ಆದುದರಿಂದ, ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 120 ಜಿಪಸ 2017 ದಿನಾಂಕ:03-11-2017 ರ ಆದೇಶವನ್ನು ರದ್ದು ಪಡಿಸಬೇಕೆಂದು ಕೋರಿರುತ್ತಾರೆ.

ಸದರಿಯವರ ಮನವಿಯನ್ನು ಪರಿಶೀಲಿಸಲಾಗಿರುತ್ತದೆ. ಉಪವಿಭಾಗಾಧಿಕಾರಿಗಳು, ವಿಜಯಪುರ ಇವರು ಮೇಲೆ ಓದಲಾದ, (3) ರ ಆದೇಶದಲ್ಲಿ ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ, ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ವಿಜಯಪುರ ಇವರು ಚುನಾವಣಾ ಉದ್ದೇಶಕ್ಕಾಗಿ ಪಡೆದುಕೊಂಡಿರುವ ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು, ಮೇಲೆ ಓದಲಾದ (4) ರ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ರ ಪ್ರಕರಣ 175 ಉಪಪ್ರಕರಣ 1 (i) ರನ್ವಯ ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ, ಜಿಲ್ಲಾ ಪಂಚಾಯತ್ ಸದಸ್ಯರು, ವಿಜಯಪುರ ಇವರು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದು ಆಯ್ಕೆಯಾಗಿರುವುದು 'ದುರ್ನಡತೆ' ಎಂದು ಪರಿಗಣಿಸಿ, ಇವರನ್ನು ವಿಜಯಪುರ ಜಿಲ್ಲಾ ಪಂಚಾಯತಿಯ ಸದಸ್ಯತ್ವದಿಂದ ವಜಾಗೊಳಿಸಿ, ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (5) ರ, ಮಾನ್ಯ ಉಚ್ಚನ್ಯಾಯಾಲಯ ಕಲಬುರಗಿ ಪೀಠದ ರಿಟ್ ಪಿಟಿಷನ್ ಸಂಖ್ಯೆ: 201935/2017 ರ ಆದೇಶದಲ್ಲಿ ವಿಜಯಪುರದ ಉಪವಿಭಾಗಾಧಿಕಾರಿಗಳು ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ, ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ವಿಜಯಪುರ ಇವರ ಜಾತಿ/ಆದಾಯ ಪ್ರಮಾಣ ಪತ್ರವನ್ನು ರದ್ದುಪಡಿಸಿದ ದಿನಾಂಕ: 19-04-2017 ರ ಆದೇಶವನ್ನು ವಜಾಗೊಳಿಸಲಾಗಿರುತ್ತದೆ.

ಈ ಮೇಲೆ ತಿಳಿಸಿದ ಕಾರಣದಿಂದಾಗಿ, ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ, ಸರ್ಕಾರವು ಈ ಹಿಂದೆ ಹೊರಡಿಸಿದ ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ ಇವರ ಸದಸ್ಯತ್ವವನ್ನು ರದ್ದುಗೊಳಿಸಿದ ಆದೇಶ ಸಂಖ್ಯೆ: ಗ್ರಾಅಪ 120 ಜಿಪಸ 2017 ದಿನಾಂಕ: 03-11-2017 ರ ಆದೇಶವನ್ನು ಸರ್ಕಾರವು ಹಿಂಪಡೆಯಲು ನಿರ್ಧರಿಸಿರುತ್ತದೆ. ಆದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 120 ಜಿಪಸ 2017, ಬೆಂಗಳೂರು, ದಿನಾಂಕ:27-11-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಉಚ್ಚ ನ್ಯಾಯಾಲಯದ ಕಲಬುರಗಿ ಪೀಠದ ರಿಟ್ ಪಿಟಿಷನ್ ಸಂಖ್ಯೆ:201935/2017 ರ ಆದೇಶದನ್ವಯ ಸರ್ಕಾರವು ಶ್ರೀ ಪ್ರಭುಗೌಡ ಚನ್ನಪ್ಪ ದೇಸಾಯಿ, ಜಿಲ್ಲಾ ಪಂಚಾಯತ್ ಸದಸ್ಯರು, ವಿಜಯಪುರ ಇವರ ಸದಸ್ಯತ್ವವನ್ನು ರದ್ದು ಪಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 120 ಜಿಪಸ 2017 ದಿನಾಂಕ:03-11-2017 ರ ಆದೇಶವನ್ನು ಹಿಂಪಡೆದುಕೊಳ್ಳಲಾಗಿದೆ ಎಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

27/11/17
(ಎಂ.ಸುಮಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ಇವರಿಗೆ ನಿಯಮಾನುಸಾರ ಮುಂದಿನ ಸೂಕ್ತ ಕ್ರಮಕ್ಕಾಗಿ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ ಜಿಲ್ಲೆ.
3. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಕಟ್ಟಡ (ಹಿಂಭಾಗ), ನಂ.8. 1ನೇ ಮಹಡಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-560052.
4. ಶ್ರೀ. ಪ್ರಭು ಗೌಡ ಚನ್ನಪ್ಪ ದೇಸಾಯಿ, ಸಾ॥ ಮಡಿಕೇಶ್ವರ, ತಾ॥ ಮುದ್ದೇಬಿಹಾಳ, ಜಿಲ್ಲೆ॥ ವಿಜಯಪುರ.
5. ವ್ಯವಸ್ಥಾಪಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ-ಇವರಿಗೆ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
6. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.